ಸಂಪುಟ : 41 ಸಂಚಿಕೆ : 11 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 06 ಫೆಬ್ರುವರಿ 2018 ಮಂಗಳವಾರ POST REG NO . L-2/RNP- 364/TMR/2018-20 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
Web : prajapragathi.com



280 ಕೋಟಿ ರೂ. ವಂಚನೆ ಪ್ರಕರಣ:ವಜ್ರ ವ್ಯಾಪಾರಿ ವಿರುದ್ಧ ಕೇಸ್

ವಿವರ : ಪುಟ 10

ಚಂದ್ರಯಾನ ಐಐ ಏಪ್ರಿಲ್ ತಿಂಗಳಿನಲ್ಲಿ ಉಡಾವಣೆಗೆ ಸಿದ್ಧತೆ

ವಿವರ : ಪುಟ 10





ಮಾನಹಾನಿ ಪ್ರಕರಣ: ದಾಖಲೆ ಪಡೆಯಲು ಕೇಜ್ರಿವಾಲ್‌ಗೆ ಅನುಮತಿ

ವಿವರ : ಪುಟ 10

ಬಿಸಿಸಿಐ ಕೇಂದ್ರ ಕಚೇರಿ ಬೆಂಗಳೂರಿಗೆ ಶಿಫ್ಟ್ ಆಗುವ ಸಾಧ್ಯತೆ

ವಿವರ : ಪುಟ 5



ಶ್ರೀ ಮಹಾಲಕ್ಷ್ಮಿ ಜ್ಯೂಯಲರ್ಸ್
ಉತ್ತಮ ಗುಣಮಟ್ಟ ಹಾಗೂ ಪರಿಶುದ್ಧವಾದ ಸೊಬಗು
SINCE 1995
ಶ್ರೀ ಮಹಾಲಕ್ಷ್ಮೀ ಆರ್ಕೆಡ್
ಎಸ್.ಎಸ್.ಪುರಂ ಮುಖ್ಯ ರಸ್ತೆ,
ತುಮಕೂರು- 0816-2276752

## ವೆಂಕೋಬ್ ಕೋಳಿ ಧಾರಣೆ

ಫಾರಂ ಕೋಳಿ 1 ಕೆಜಿಗೆ ರೂ.62/-
ರಿಟೈಲ್ ಮಾರಾಟದ ದರ ಕೆ.ಜಿ.ಗೆ ರೂ. 84/-

| ವಿತ್‌ಸ್ಕಿನ್ | ವಿತೌಟ್ ಸ್ಕಿನ್ |
|---|---|
| ರೂ.122/- | ರೂ.139/- |

ಡಜನ್ ಮೊಟ್ಟೆಗೆ ರೂ.50/-

## ಭಾರತೀಯ ಸೇನೆ ವಿರುದ್ಧ ಎಫ್ ಐಆರ್

ಶ್ರೀನಗರ

ಜಮ್ಮು ಮತ್ತು ಕಾಶ್ಮೀರದ ಕುಲ್ಗಮ್ ಜಿಲ್ಲೆಯಲ್ಲಿ ಸೋಮವಾರ ಕಲ್ಲು ತೂರಾಟಗಾರರ ಮೇಲೆ ಭದ್ರತಾ ಸಿಬ್ಬಂದಿ ಗುಂಡು ಹಾರಿಸಿದ್ದು, ಘಟನೆಯಲ್ಲಿ 22 ವರ್ಷದ ಯುವಕ ಗಾಯಗೊಂಡಿದ್ದಾನೆ. ಈ ಸಂಬಂಧ ಭಾರತೀಯ ಸೇನೆಯ 10 ಗರ್ವಾಲ್ ಘಟಕದ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

### ನೀರಿನ ಉಳಿತಾಯದ ಬಗ್ಗೆ ರೈತರಿಗೆ ವಸ್ತು ಪ್ರದರ್ಶನದಲ್ಲಿ ಅರಿವುಂಟಾಗುತ್ತಿದೆ:ಗೃಹ ಸಚಿವ

# ಬೆಲೆ ನಿಗದಿಯಾದರೆ ಮಾತ್ರ ಕೃಷಿ ಕ್ಷೇತ್ರ ಉಳಿವು

ತುಮಕೂರು

ಜಾತ್ರೆಯಲ್ಲಿ ಪ್ರತಿದಿನ 50 ಸಾವಿರ ಜನ ವಸ್ತು ಪ್ರದರ್ಶನ ವೀಕ್ಷಿಸುತ್ತಿದ್ದಾರೆ. ಇವರಲ್ಲಿ ಬಹುತೇಕ ರೈತಾಪಿ ವರ್ಗವಿದ್ದು, ಕೃಷಿ ಕುರಿತು ತಮ್ಮ ಅರಿವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ ಎಂದು ಗೃಹ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಅವರು ಸೋಮವಾರ ಸಂಜೆ ಸಿದ್ಧಗಂಗಾ ಜಾತ್ರೆಯಲ್ಲಿ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಉದ್ಘಾಟಿಸಿ ಮಾತನಾಡುತ್ತಿದ್ದರು. ಹಿಂದೆ ಹಳೆಯ ತಳಿಯಿಂದ ಹೆಚ್ಚು ಇಳುವರಿ ಬರುತ್ತಿರಲಿಲ್ಲ, ಇಂದು ಕಡಿಮೆ ಕಾಲದಲ್ಲಿ,

> ಹನಿ ಹನಿ ನೀರನ್ನು ಕೂಡ ಉಳಿಸಿ ಬರುಡು ಭೂಮಿಯನ್ನು ಹಸಿರು ಮಾಡಬೇಕಾಗಿದೆ. ಆ ಮೂಲಕ ರೈತನ ಬದುಕು ಹಸನು ಮಾಡಿ ದೇಶ ಕಟ್ಟಬೇಕಾಗಿದೆ. ಬದಲಾವಣೆ ಬೆಳವಣಿಗೆಗೆ ಸಾಕ್ಷಿ. ಹೊಸ ಹೊಸ ಆವಿಷ್ಕಾರಗಳು ಆಗಬೇಕಾಗಿದೆ. ಆ ಆವಿಷ್ಕಾರಗಳು ವಸ್ತು ಪ್ರದರ್ಶನದ ಮೂಲಕ ರೈತರಲ್ಲಿ ಅರಿವು ಮೂಡಿಸಬೇಕು. ರಾಜ್ಯ ಸರ್ಕಾರ ಮತ್ತು ಖಾಸಗಿಯವರ ಸಹಭಾಗಿತ್ವದಲ್ಲಿ ವಸ್ತು ಪ್ರದರ್ಶನವು ನಡೆಯುತ್ತಿದೆ.
>
> -ಶ್ರೀ ಸಿದ್ದಲಿಂಗ ಸ್ವಾಮಿಗಳು



ಸಿದ್ದಗಂಗಾ ಕೃಷಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಗೃಹ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿದರು. ಸಿಇಒ ಅನ್ನೀಸ್ ಕೆ ಜಾಯ್, ಸಚಿವ ಟಿ.ಬಿ.ಜಯಚಂದ್ರ, ಶ್ರೀ ಸಿದ್ದಲಿಂಗಾಸ್ವಾಮಿಗಳು, ಶಾಸಕರಾದ ಸುರೇಶ್ ಗೌಡ, ಡಾ|| ರಫೀಕ್ ಅಹಮದ್ ಸೇರಿದಂತೆ ಇತರರಿದ್ದರು.

ಕಡಿಮೆ ನೀರಿನಲ್ಲಿ ಹೆಚ್ಚು ಇಳುವರಿ ಬರುತ್ತಿದೆ. ನೀರಿನ ಹನಿ ಹನಿ ಉಳಿತಾಯ, ಅಂತರ್ಜಲ ಹೆಚ್ಚಳ, ಸಾಲು ಮರಗಳ ಉಪಯುಕ್ತತೆ ಇದೆಲ್ಲದರ ಬಗ್ಗೆ ವಸ್ತು ಪ್ರದರ್ಶನದಲ್ಲಿ ರೈತರಿಗೆ ಮಾಹಿತಿ ದೊರೆಯುತ್ತಿರುವುದರಿಂದ ಅವರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀಸಿದ್ಧಲಿಂಗ ಸ್ವಾಮಿಗಳು ತಮ್ಮ ಆಶೀರ್ವಚನದಲ್ಲಿ, ಪರಮಪೂಜ್ಯ ಡಾ.ಶ್ರೀ ಶ್ರೀ ಶಿವಕುಮಾರ ಮಹಾ ಸ್ವಾಮಿಗಳ ಅನೇಕಾನೇಕ ಸೇವಾ ಕೈಂಕರ್ಯಗಳಲ್ಲಿ ವಸ್ತು ಪ್ರದರ್ಶನವೂ ಕೂಡ ಪ್ರಮುಖವಾದುದಾಗಿದೆ. ಕೃಷಿ ಕ್ಷೇತ್ರವು ಶೇ.30 ನೀರಾವರಿಯಾದರೆ, ಶೇ.70 ಮಳೆಯಾಧಾರಿತವಾಗಿದೆ. ನೀರಿನ ಸದ್ಬಳಕೆ ಕುರಿತು ರೈತರಲ್ಲಿ ವಸ್ತು ಪ್ರದರ್ಶನದ ಮೂಲಕ ಅರಿವುಂಟು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಅವರು ರೈತರ ಬದುಕು ದಿನೇ ದಿನೇ ಹೆಚ್ಚು ಸಂಕಷ್ಟಕ್ಕೆ ಈಡಾಗುತ್ತಿದೆ. ಮಳೆ ಇಲ್ಲದೆ ಬೆಳೆ ಇಲ್ಲ, ಮಳೆ-ಬೆಳೆ ಎರಡೂ ಸಮೃದ್ಧವಾಗಿ ಆದಾಗ ಬೆಲೆ ಇರುವುದಿಲ್ಲ, ಸರ್ಕಾರವು ರೈತನ ಬೆಳೆಗೆ ನಿಶ್ಚಿತವಾದ ಬೆಲೆ ನಿಗದಿ ಮಾಡಿದರೆ ಮಾತ್ರ ಕೃಷಿ ಉಳಿಯುತ್ತದೆ. ಇಲ್ಲವಾದರೆ ರೈತರ ಮಕ್ಕಳು ಕೂಡ ಕೃಷಿಯಲ್ಲಿ ತೊಡಗಲು ಹಿಂಜರಿಯುತ್ತಾರೆ. ನೀರನ್ನು ಸೃಷ್ಟಿಸಲು ವಿಜ್ಞಾನಿಗಳಿಂದ ಕೂಡ ಸಾಧ್ಯವಾಗದು. ನೀರಿನ ಸದ್ಬಳಕೆ ಇಂದಿನ ಕ್ರಾಂತಿಯಾಗಬೇಕಿದೆ. ಇಲ್ಲವಾದರೆ ಭವಿಷ್ಯದಲ್ಲಿ ಜೀವ ಜಂತುಗಳ ಉಳಿವು ಕೂಡ ದುರಂತವಾಗಲಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಟಿ.ಬಿ. ಜಯಚಂದ್ರ ಮಾತನಾಡಿ, ಡಿ.ಎಂ. ನಂಜುಂಡಪ್ಪ ವರದಿ ಪ್ರಕಾರ ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು 2030ರ ಇಸವಿಯೊಳಗೆ ಮರುಭೂಮಿಯಾಗುವ ಅಪಾಯವಿದೆ. ಆದ್ದರಿಂದ ಅಪರೂಪವಾಗಿ ಸುರಿಯುವ ಮಳೆಯ ಹನಿ ಹನಿ ನೀರನ್ನು ಇಂಗಿಸಿ ಅಂತರ್ಜಲ ಹೆಚ್ಚಿಸಬೇಕಾಗಿದೆ. ಕೃಷಿ ಬೇಡವಾದ ಕ್ಷೇತ್ರವಾಗಿದೆ. ಕೃಷಿ ಲಾಭವಿಲ್ಲವಾಗಿದೆ. ಅಕಾಲಿಕ ಮಳೆಯಿಂದ, ಹವಾಮಾನ ವೈಪರೀತ್ಯದಿಂದ ಬೆಳೆ ಬರುತ್ತಿಲ್ಲ, ಬೆಳೆ ಬಂದರೂ ಬೆಲೆ ಇಲ್ಲ, ಸರ್ಕಾರ ರೈತರಿಗೆ ಎಷ್ಟೇ ಪ್ರೋತ್ಸಾಹ ನೀಡಿದರೂ ಆತ್ಮಹತ್ಯೆಯನ್ನು ತಡೆಯಲಾಗುತ್ತಿಲ್ಲ, ರೈತ ಸಮುದಾಯ ಆತ್ಮವಿಶ್ವಾಸ ಕಳೆದುಕೊಳ್ಳಬಾರದು. ಈ ಬಾರಿ

>>> 5ನೇ ಪುಟಕ್ಕೆ

# ಸೋಲಾರ್ ಲೈಟ್-ಬ್ಯಾಟರಿ ಕಳವು

ತುಮಕೂರು

ತುಮಕೂರು ನಗರದ ಜಿಲ್ಲಾಧಿಕಾರಿ ಕಚೇರಿಯಿಂದ ಅಮಾನಿಕೆರೆ ಪಕ್ಕ ಕೋತಿತೋಪು ಮೂಲಕ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತದವರೆಗೆ ರಸ್ತೆ ಮಧ್ಯೆ ಅಳವಡಿಸಿರುವ ಸೋಲಾರ್ ವಿದ್ಯುತ್ ಬೀದಿದೀಪಗಳು ಮತ್ತು ಅವುಗಳಿಗೆ ಅಳವಡಿಸಿರುವ ಬ್ಯಾಟರಿಗಳು ಕಳುವಾಗಿವೆ ಎಂದು ತುಮಕೂರು ಮಹಾನಗರ ಪಾಲಿಕೆಯು ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿಗಳಿಗೆ ಪತ್ರ ಬರೆದಿರುವ ಸಂಗತಿ ಇದೀಗ ಬೆಳಕಿಗೆ ಬಂದಿದ್ದು, ಈ ವಿಷಯ ಮಹಾನಗರ ಪಾಲಿಕೆಯಲ್ಲಿ ತೀವ್ರ ಚರ್ಚೆಗೊಳಗಾಗಿದೆ.

ಮಹಾನಗರ ಪಾಲಿಕೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಈ ಬಗ್ಗೆ ದೂರು ಬರೆದಿದ್ದಾರೆ. ''ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ. 19 ಕೋತಿತೋಪು ರಸ್ತೆಯಲ್ಲಿ ಶ್ರೀ ಶಿವಕುಮಾರ ಸ್ವಾಮಿ ವೃತ್ತದಿಂದ ಕೋಟೆ ಆಂಜನೇಯ ಸ್ವಾಮಿ ವೃತ್ತದವರೆಗೆ ಅಳವಡಿಸಿರುವ ಸೋಲಾರ್ ವಿದ್ಯುತ್ ಬೀದಿ ದೀಪಗಳಲ್ಲಿರುವ ಬ್ಯಾಟರಿಗಳು ಮತ್ತು ಲೈಟ್‌ಗಳು ಕಳವಾಗಿದ್ದು, ಸಾರ್ವಜನಿಕರಿಗೆ ರಾತ್ರಿ ವೇಳೆ ಬೀದಿದೀಪ ವ್ಯವಸ್ಥೆ ಇಲ್ಲದೆ ಸದರಿ ರಸ್ತೆಯಲ್ಲಿ ಸಂಚರಿಸಲು ತೀವ್ರ ತೊಂದರೆಯಾಗುತ್ತಿದೆ. ತುಮಕೂರು ಮಹಾನಗರ ಪಾಲಿಕೆಗೆ ಇದರಿಂದ ಸುಮಾರು ರೂ. 5 ಲಕ್ಷ ನಷ್ಟ ಉಂಟಾಗಿದ್ದು, ಈ ಸಂಬಂಧ ದೂರನ್ನು ದಾಖಲಿಸಿಕೊಂಡು ಮುಂದಿನ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಕೋರಿದೆ'' ಎಂದು ಪತ್ರದಲ್ಲಿ ವಿವರಿಸಲಾಗಿದೆ.

**70 ಬ್ಯಾಟರಿಗಳ ಕಳವು:** ಈ ಬಗ್ಗೆ 'ಪ್ರಜಾಪ್ರಗತಿ'ಯು ವಿವಿಧ ಮೂಲಗಳನ್ನು ಸಂಪರ್ಕಿಸಿದಾಗ, ''ಒಟ್ಟು 70 ಬ್ಯಾಟರಿಗಳು ಕಳುವಾಗಿವೆ'' ಎಂಬ ಮಾಹಿತಿ ಲಭಿಸಿದೆ. ''ಇಲ್ಲಿ ಒಟ್ಟು 142 ಕಂಬಗಳನ್ನು ಅಳವಡಿಸಲಾಗಿದೆ. ಪ್ರತಿ ಕಂಬಕ್ಕೆ ಎರಡು ಸೋಲಾರ್ ದೀಪಗಳಂತೆ ಒಟ್ಟಾರೆ 284 ಸೋಲಾರ್ ಲೈಟ್‌ಗಳು ಅಳವಡಿಸಲ್ಪಟ್ಟಿವೆ. ಪ್ರತಿ ಕಂಬಕ್ಕೆ ಒಂದರಂತೆ ಒಟ್ಟು 142 ಬ್ಯಾಟರಿಗಳನ್ನು ಅಳವಡಿಸಲಾಗಿದೆ. ಇವುಗಳಲ್ಲಿ 70 ಬ್ಯಾಟರಿಗಳು ನಾಪತ್ತೆಯಾಗಿವೆ. ಎಕ್ಸೈಡ್ ಕಂಪನಿಗೆ ಸೇರಿದ ಈ ಬ್ಯಾಟರಿಯೊಂದಕ್ಕೆ ಸುಮಾರು 12,000 ರೂ. ವೆಚ್ಚ ಆಗಬಹುದು'' ಎಂದು ತಿಳಿದುಬಂದಿದೆ.

**ದೂರಿನಲ್ಲಿ ವಿವರವೇಕಿಲ್ಲ?:** ''ಮಹಾನಗರ ಪಾಲಿಕೆಯಿಂದ ಪೊಲೀಸರಿಗೆ ಸಲ್ಲಿಸಲಾದ ದೂರು ಪತ್ರದಲ್ಲಿ ಸೋಲಾರ್ ಲೈಟ್ ಮತ್ತು ಬ್ಯಾಟರಿಗಳ ಬಗ್ಗೆ ಏಕೆ ವಿವರಣೆ ನೀಡಿಲ್ಲ?'' ಎಂಬುದೀಗ ಚರ್ಚೆಗೆಡೆಮಾಡಿದೆ. ''ಒಟ್ಟು ಈ ರಸ್ತೆಯಲ್ಲಿ ಎಷ್ಟು ಕಂಬಗಳಿವೆ? ಅವುಗಳಿಗೆ ಅಳವಡಿಸಿರುವ ಲೈಟ್‌ಗಳೆಷ್ಟು? ಬ್ಯಾಟರಿಗಳೆಷ್ಟು? ಯಾವ ಕಂಪನಿಗೆ ಸೇರಿದ್ದು? ಅದರ ಮೌಲ್ಯ ಎಷ್ಟು? ಈಗ

>>>10ನೇ ಪುಟಕ್ಕೆ

## ಆದಾಯ ತೆರಿಗೆ ದರ ಇಳಿಕೆಗೆ ಒತ್ತು

ನವದೆಹಲಿ

ವೈಯಕ್ತಿಕ ಆದಾಯ ತೆರಿಗೆ ಸಂಗ್ರಹದಲ್ಲಿ ಹೆಚ್ಚಳ ಕಂಡುಬಂದ ನಂತರ ಕಾರ್ಪೊರೇಟ್ ಆದಾಯ ತೆರಿಗೆ ದರವನ್ನು ತಗ್ಗಿಸಲಾಗುವುದು ಎಂದು ಹಣಕಾಸು ಇಲಾಖೆ ಕಾರ್ಯದರ್ಶಿ ಹಮ್ಮುಕ್ ಆದಿಯಾ ತಿಳಿಸಿದ್ದಾರೆ.

ಕಾರ್ಪೊರೇಟ್ ಆದಾಯ ತೆರಿಗೆ ಪಾವತಿಯಲ್ಲಿ ಕಡಿಮೆ ಮಾಡಬೇಕು ಎಂದು ಒತ್ತಾಯ ಕೇಳಲ್ಪಟ್ಟಾಗ ಸರ್ಕಾರಕ್ಕೂ ಕಾರ್ಪೊರೇಟ್ ತೆರಿಗೆ ದರವನ್ನು ಕಡಿಮೆ ಮಾಡುವ ಯೋಜನೆಯಿತ್ತು. ಆದರೆ ಇಂದು ಬಹುತೇಕ ರಾಷ್ಟ್ರಗಳಲ್ಲಿ ವೈಯಕ್ತಿಕ ಆದಾಯ ತೆರಿಗೆ ಪಾವತಿ ಕಾರ್ಪೊರೇಟ್ ಆದಾಯ ತೆರಿಗೆ ದರಕ್ಕೆ ಹೋಲಿಸಿದರೆ ತುಂಬಾ ಹೆಚ್ಚಾಗಿದೆ.

ಆದರೆ ಭಾರತದಲ್ಲಿ ವೈಯಕ್ತಿಕ ಆದಾಯ ತೆರಿಗೆ ಹೆಚ್ಚಾಗಬೇಕು. ಒಂದು ಬಾರಿ ಅದು ಹೆಚ್ಚಾದರೆ ಕಾರ್ಪೊರೇಟ್ ಆದಾಯ ತೆರಿಗೆಯನ್ನು ಕಡಿಮೆ ಮಾಡಲು ಅವಕಾಶವಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟದ ಸಭೆಯಲ್ಲಿ ಹಮ್ಮುಕ್ ಆದಿಯಾ ತಿಳಿಸಿದರು.

### ಸಂವಿಧಾನಬದ್ಧ ಹುದ್ದೆಯಲ್ಲಿದ್ದು ಕ್ಷುಲ್ಲಕ ಮಾತು

# ಮೋದಿ ವಿರುದ್ಧ ಸಿಎಂ ತಿರುಗೇಟು

ಬೆಂಗಳೂರು

ರಾಜ್ಯ ಸರ್ಕಾರದ ಬಗ್ಗೆ ಅನಗತ್ಯ ಸುಳ್ಳು ಆರೋಪ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರವಾಗಿ ಹರಿಹಾಯ್ದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂವಿಧಾನಬದ್ಧ ಹುದ್ದೆಯಲ್ಲಿದ್ದು ಕ್ಷುಲ್ಲಕವಾಗಿ ಮಾತನಾಡುವುದು ಸರಿಯಲ್ಲ ಎಂದಿದ್ದಾರೆ.

ಬಿಜೆಪಿ ಪರಿವರ್ತನಾ ಯಾತ್ರೆಯ ಸಮಾರೋಪ ಸಮಾರಂಭದ ತಮ್ಮ ಭಾಷಣದಲ್ಲಿ ಸುಳ್ಳುಗಳ ಸರಮಾಲೆ ಹೆಣೆದಿದ್ದಾರೆ. ರಾಜ್ಯದ ಜನತೆ, ಮುಖ್ಯಮಂತ್ರಿ ಹುದ್ದೆಗೆ ಅಪಚಾರ ಮಾಡಿರುವ ನರೇಂದ್ರ ಮೋದಿ ಪ್ರಧಾನಿ ಹುದ್ದೆಯಲ್ಲಿ ಮುಂದುವರೆಯುವ ನೈತಿಕತೆ ಕಳೆದುಕೊಂಡಿದ್ದಾರೆ. ದೇಶದ ಜನತೆ ಇವರ ಬೂಟಾಟಿಕೆ ನೋಡಿದ್ದಾರೆ. ತಮ್ಮ ನಾಯಕತ್ವವಲ್ಲ, ವಾಸ್ತವವಾಗಿ ಮೋದಿ ಅವರ ಸರ್ಕಾರದ ಕೌಂಟ್‌ಡೌನ್ ಆರಂಭವಾಗಿದೆ ಎಂದು ತಿರುಗೇಟು ನೀಡಿದ್ದಾರೆ.

ಮೋದಿ ಅವರ ಜನಪ್ರಿಯತೆ ಕುಸಿಯುತ್ತಿದೆ. ರಾಜಸ್ಥಾನದಲ್ಲಿ ನಡೆದ ಎರಡು ಲೋಕಸಭೆ ಮತ್ತು ಒಂದು ವಿಧಾನಸಭೆ ಉಪ ಚುನಾವಣೆಯಲ್ಲಿ ಬಿಜೆಪಿ ಸೋಲುಂಡಿರುವುದು ಇದಕ್ಕೆ ಜ್ವಲಂತ ಉದಾಹರಣೆಯಾಗಿದೆ. ರಾಜ್ಯ ಸರ್ಕಾರ ಗಟ್ಟಿಯಾಗಿದೆ. ಇನ್ನೊಂದು ಅವಧಿಗೆ ಅಧಿಕಾರಕ್ಕೆ ಬಂದೇ ಬರುತ್ತದೆ. ಆದರೆ ಬಿಜೆಪಿ ಸಂಕಷ್ಟ ಪರಿಸ್ಥಿತಿಯಲ್ಲಿದೆ ಎಂದರು.

ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತಾ ಷಾ ಒಂದಲ್ಲ, ನೂರು ಬಾರಿ ರಾಜ್ಯಕ್ಕೆ ಬಂದು, ಯಾವುದೇ ರೀತಿಯ ಆರೋಪ ಮಾಡಿದರೂ ರಾಜ್ಯದ ಜನತೆ ನಂಬುವುದಿಲ್ಲ, ನಮ್ಮ ಸರ್ಕಾರಕ್ಕೆ ಜನರ ಆಶೀರ್ವಾದವಿದೆ. ನಾವು ಮತ್ತೊಮ್ಮೆ ಅಧಿಕಾರದ ಚುಕ್ಕಾಣಿ ಹಿಡಿದೇ ತೀರುತ್ತೇವೆ. ನಮ್ಮನ್ನು ತಡೆಯಲು ಬಿಜೆಪಿಯವರಿಂದ ಸಾಧ್ಯವಿಲ್ಲ ಎಂದರು.

> ಇಡೀ ದೇಶದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಇಂತಹ ರಾಜ್ಯದ ಬಗ್ಗೆ ಸುಳ್ಳೇ ಸುಳ್ಳು ಆರೋಪ ಮಾಡುವುದು ಪ್ರಧಾನಿ ಅವರಿಗೆ ಶೋಭೆ ತರುವುದಿಲ್ಲ, ನರೇಂದ್ರ ಮೋದಿ 130 ಕೋಟಿ ಜನರಿಗೆ ಪ್ರಧಾನಿ. ಆದರೆ ಭ್ರಷ್ಟಾಚಾರ ಪ್ರಕರಣದಲ್ಲಿ ಜೈಲಿಗೆ ಹೋಗಿ ಬಂದ ಯಡಿಯೂರಪ್ಪ ಅವರನ್ನು ಕೂರಿಸಿಕೊಂಡು ನಮ್ಮ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಮಾತನಾಡಲು ನಾಚಿಕೆಯಾಗಬೇಕು.
>
> 
>
> -ಸಿದ್ದರಾಮಯ್ಯ, ಸಿಎಂ

ಕಿಕ್ಕಿರಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಶೇ. 10 ಪರ್ಸೆಂಟ್ ಕಮಿಷನ್ ನೀಡಿರುವ ಹೇಳಿಕೆ ಆಧಾರ ರಹಿತ ಹಾಗೂ ಬೇಜವಾಬ್ದಾರಿತನದಿಂದ ಕೂಡಿದೆ. ಯಾವ ಯೋಜನೆಗಳಲ್ಲಿ ಪರ್ಸೆಂಟೇಜ್ ತೆಗೆದುಕೊಳ್ಳಲಾಗಿದೆ

>>> 5ನೇ ಪುಟಕ್ಕೆ

# ವಿಧಾನ ಮಂಡಲದ ಅಧಿವೇಶನ ಆರಂಭ

ಬೆಂಗಳೂರು

ರಾಜ್ಯದಲ್ಲಿ ಭುಗಿಲೇಳುವ ಕೋಮು ಹಿಂಸಾಚಾರ ಹತ್ತಿಕ್ಕಲು ತಮ್ಮ ಸರ್ಕಾರ ಯಶಸ್ವಿಯಾಗಿದೆ. ಕಾವೇರಿ-ಕೃಷ್ಣಾ ನದಿ ನೀರಿನ ವಿಷಯದಲ್ಲಿ ರಾಜ್ಯದ ಹಕ್ಕನ್ನು ಉಳಿಸಿಕೊಳ್ಳಲಿದೆ ಮತ್ತು ಮಹದಾಯಿ ನದಿ ನೀರಿನಲ್ಲಿ ತನ್ನ ಪಾಲನ್ನು ಪಡೆಯುವ ಬದ್ಧತೆಯನ್ನು ಪ್ರದರ್ಶಿಸಲಿದೆ ಎಂದು ರಾಜ್ಯಪಾಲ ವಜೂಭಾಯಿ ವಾಲಾ ಹೇಳಿದ್ದಾರೆ.

14ನೇ ವಿಧಾನಸಭೆಯ ಕಡೆಯ ಜಂಟಿ ಅಧಿವೇಶನಕ್ಕೆ ಚಾಲನೆ ನೀಡಿ, 33 ಪುಟಗಳ ತಮ್ಮ ಸುಧೀರ್ಘ ಭಾಷಣದಲ್ಲಿ ರಾಜ್ಯ ಸರ್ಕಾರ ಬದ್ಧತೆ, ಸಾಗಿ ಬಂದ ಹಾದಿ, ಮುಂಬರುವ ದಿನಗಳಲ್ಲಿ ಆಡಳಿತದ ದಿಕ್ಕು ದಿಸೆಯನ್ನು ಅನಾವರಣಗೊಳಿಸಿದ ರಾಜ್ಯ ಪಾಲರು, ಎಲ್ಲರಿಗೂ ಉಚಿತ ಚಿಕಿತ್ಸೆ ಒದಗಿಸುವ ಯುನಿವರ್ಸೆಲ್ ಹೆಲ್ತ್ ಸ್ಕೀಂ, ರೈತರ ಎಂಟು ಸಾವಿರ ಕೋಟಿ ರೂಗಳಿಗೂ ಅಧಿಕ ಕೃಷಿ ಸಾಲ ಮನ್ನಾ ಸೇರಿದಂತೆ ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿ, ಅನುಷ್ಠಾನಗೊಳಿಸಲು ತಮ್ಮ ಸರ್ಕಾರ ಮುಂದಾಗಿದೆ ಎಂದರು.

> ಬೆಂಗಳೂರು, ತುಮಕೂರು, ಕೋಲಾರ, ಹಾಸನ, ಚಿಕ್ಕಮಗಳೂರು, ರಾಮನಗರ ಸೇರಿದಂತೆ ಹಲವು ಬರಪೀಡಿತ ಜಿಲ್ಲೆಗಳಲ್ಲಿ ಅಂತರ್ಜಲವನ್ನು ಹೆಚ್ಚಿಸಲು ಎತ್ತಿನ ಹೊಳೆ ಯೋಜನೆಯನ್ನು ಆರಂಭಿಸಲಾಗಿದೆ ಹಾಗೂ ಪಶುಭಾಗ್ಯ ಯೋಜನೆಯಡಿ ಜಾನುವಾರುಗಳು, ಕುರಿ, ಮೇಕೆ, ಹಂದಿ ಮತ್ತು ಕೋಳಿ ಸಾಕಾಣಿಕೆ ಘಟಕಗಳೊಂದಿಗೆ 21,399 ಫಲಾನುಭವಿಗಳಿಗೆ ಅನುಕೂಲವಾಗಿದೆ.ಇದೇ ರೀತಿ ಹಾಲು ಉತ್ಪಾದನೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ.
>
> -ವಜುಭಾಯ್ ವಾಲಾ.



ಕೋಮು ಹಿಂಸಾಚಾರಕ್ಕೆ ಕಡಿವಾಣ ಹಾಕಲು ಸರ್ಕಾರ ಬದ್ಧವಾಗಿದೆ. ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಪೋಲೀಸ್ ವ್ಯವಸ್ಥೆಯನ್ನು ಬಲಗೊಳಿಸಲಾಗಿದೆ. ಎಂಭತ್ನಾಲ್ಕು ಪೊಲೀಸ್ ಠಾಣೆಗಳನ್ನು ಸ್ಥಾಪಿಸಲಾಗಿದೆ.2 ಜಿಲ್ಲಾ ಪೋಲಿಸ್ ಕಚೇರಿ ಸಂಕೀರ್ಣಗಳು,232 ವಸತಿ ಕ್ವಾರ್ಟರ್ಸ್‌ಗಳು, 6 ಜಿಲ್ಲಾ ಪೋಲೀಸ್ ತರಬೇತಿ ಕೇಂದ್ರಗಳು, 10 ಪೊಲೀಸ್ ಉಪಠಾಣೆಗಳು, 10 ಬ್ಯಾರಕ್‌ಗಳು,6 ಶಸ್ತ್ರಾಗಾರಗಳನ್ನು ನಿರ್ಮಿಸಿ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆ ತರಲಾಗುತ್ತಿದೆ ಎಂದರು.

ಸಾರ್ವಜನಿಕರನ್ನು ಒಳಗೊಂಡ ನಾಗರಿಕ ಕೇಂದ್ರಿತ ಪೊಲೀಸ್ ಹೆಚ್ಚಿನ ಬಲ ನೀಡ ಲಾಗಿದೆ. ಸಬ್-ಬೀಟ್ ವ್ಯವಸ್ಥೆ ಮಾಡಲಾಗಿದೆ. ಗಸ್ತು ವಾಹನಗಳ ಸಂಖ್ಯೆಯನ್ನು ಹೆಚ್ಚಳ ಮಾಡ ಲಾಗಿದೆ. 29,684 ಪೋಲೀಸ್ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ ಎಂದು ಅವರು ಹೇಳಿದರು.

>>> 5ನೇ ಪುಟಕ್ಕೆ

# ಬೋರ್ ಕೊರೆದರೂ ವಿದ್ಯುತ್ ಸಂಪರ್ಕ ಇಲ್ಲ!

## ಬೆಸ್ಕಾಂ ಬೇಜವಾಬ್ದಾರಿಯಿಂದಾಗಿ ಗಂಗಾಕಲ್ಯಾಣ ಯೋಜನೆಗೆ ತೊಡಕು

■ ಭೂಷಣ್ ಮಿಡಿಗೇಶಿ

ಗಂಗಾಕಲ್ಯಾಣವೆಂದರೆ ಬಡವರ ಮೂಗಿಗೆ ತುಪ್ಪ ಸವರುವ ಕೆಲಸ..ಯಾರೋ ಪುಣ್ಯಾತ್ಮರ ಕೈಯೋ ಕಾಲೋ ಹಿಡಿದು,ಇಲ್ಲದ ವಶೀಲಿ ಬಳಸಿ, ಶಾಸಕರ ಕೃಪಾಕಟಾಕ್ಷಕ್ಕೆ ಅಲ್ಲದೆ ಶಾಸಕರುಗಳ ಆಪ್ತರಿಗೆ ಸಲಾಂ ಹೊಡೆದು ಸಾಕಾಗಿ ಉಚಿತ ಬೋರ್ ಕೊರೆಸಿಕೊಂಡವರ ಪಾಡು ಹೇಳತೀರದು....ಇಲ್ಲಿ ಯಾರನ್ನೂ ಪ್ರಶ್ನೆ ಮಾಡುವಂತೆಯೇ ಇಲ್ಲ, ಯಾಕೆಂದರೆ ಬೋರ್ ಕೊರೆಸಿಕೊಳ್ಳುವುದೇ ಒಂದು ದೊಡ್ಡಸಾಹಸದ ಮತ್ತು ಜೀವಮಾನದ ಸಾಧನೆಯಾಗಿರುತ್ತದೆ.ಹಾಗಾಗಿ ಕೊರೆದಾಗ ಕೊಳವೆ ಬಾವಿ..ಪಡಿಪಾಟಲು ಪಟ್ಟಾಗ ಪಂಪು ಮೋಟರು...ವರ್ಷಾನುಗಟ್ಟಲೆ ವಿಲವಿಲ ಒದ್ದಾಡಿದಾಗ ವಿದ್ಯುತ್ ಸಂಪರ್ಕ.. ಇದರ ಬಗ್ಗೆ ಬರೆಯುತ್ತಾ ಹೋದರೆ ಒಂದೊಂದು ನಿಗಮದಲ್ಲಿ ಒಂದೊಂದು ಪ್ರಕರಣವೂ ಒಂದೊಂದು ದೃಷ್ಟಾಂತವಾಗುತ್ತದೆ.

**ಗಂಗಾ ಕಲ್ಯಾಣಕ್ಕೆ ಹಿಡಿದಿರುವ ಬೆಸ್ಕಾಂ ಗ್ರಹಣ..!!**

ಸಾಕಷ್ಟು ಕಸರತ್ತುಗಳನ್ನು ಮಾಡಿ ಹೊಲದಲ್ಲಿ ಕೊರೆಸಿಕೊಳ್ಳುವ ಕೊಳವೆಬಾವಿಯಲ್ಲಿ ನೀರು ಸಿಕ್ಕಿದಾಗ ರೈತನ ಮೊಗದಲ್ಲಿ ಸಂತಸ ಮೂಡುವುದು ಸಹಜ. ಆದರೆ ಕೊಳವೆ ಬಾವಿಯಿಂದ ನೀರು ಈಚೆ ಬರುವ ಹೊತ್ತಿಗೆ ಖಂಡುಗ ನೀರು ಅವನ ಕಣ್ಣಿಂದ ಈಚೆ ಬಂದಿರುತ್ತದೆ.ಇಲ್ಲಿನ ಪ್ರಧಾನ ಭೂಮಿಕೆಯ ಪಾತ್ರಧಾರಿಗಳು ಬೆಸ್ಕಾಂನ ವಿವಿಧ ಹಂತದ ಅಧಿಕಾರಿಗಳು ಮತ್ತು ಸ್ಥಳೀಯ ಗುತ್ತಿಗೆದಾರರೇ ಹೊರತು ಬೇರ್‍ಯಾರೂ ಅಲ್ಲ..ತುಂಡು ಗುತ್ತಿಗೆ ನೀಡುವ ದೊಡ್ಡ ಗುತ್ತಿಗೆದಾರರು




ಕರೆಂಟ್ ಕಂಬ ತಂದು ಹಾಕುವುದರಿಂದ ಹಿಡಿದು ಎಲ್ಲಾ ಹಂತಗಳಲ್ಲಿಯೂ ವಿಪರೀತ ಶೋಷಣೆ ಮಾಡುವುದು ಅತ್ಯಂತ ಸಾಮಾನ್ಯವಾಗಿಬಿಟ್ಟಿದೆ.ಇದಕ್ಕೆ ದೂರುಗಳೇನಾದರೂ ಹೇಳಲು ಹೋದರೆ ಕೊರೆದಿರುವುದೇ ಪುಗಸಟ್ಟೆ ಬೋರ್‌ವೆಲ್.. ಅದರಲ್ಲಿ ಅರ್ಜೆಂಟ್ ಬೇರೆ ಎಂಬ ಉಡಾಫೆಯ ಮಾತುಗಳು. ನಿಗಮಗಳ ವತಿಯಿಂದ ಮೊದಲೇ ಹಣ ಪೀಕಿಸಿಕೊಂಡು ಠೇವಣಿ ಇಟ್ಟುಕೊಳ್ಳುವ ಬೆಸ್ಕಾಂ ವೃಥಾ ಕಾಲಕ್ಷೇಪ ಮಾಡಿ ರೈತರನ್ನು ಅಲೆಯುವಂತೆ ಮಾಡುವುದು ಸಾಮಾನ್ಯವಾಗಿಬಿಟ್ಟಿದೆ.

ಕೈಗೆ ಬಂದ ತುತ್ತು ಬಾಯಿಗಿಲ್ಲ

**ನೋಂದಣಿಯಾಗಿ ನೆನೆಗುದಿಗೆ ಬಿದ್ದಿವೆ ನೂರಾರು ಅರ್ಜಿಗಳು..!!**

> ಕಳೆದ ವರ್ಷ ಡಿಸೆಂಬರ್ ಅಂತ್ಯದ ವೇಳೆಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ತುಮಕೂರು ಬೆಸ್ಕಾಂ ವಿಭಾಗದಿಂದ 144, ತಿಪಟೂರು ವಿಭಾಗದಿಂದ 191, ಮಧುಗಿರಿ ವಿಭಾಗದಿಂದ 476 ಒಟ್ಟು 811 ಕೊಳವೆ ಬಾವಿಗಳಿಗೆ ಸಂಪರ್ಕವನ್ನು ಕಲ್ಪಿಸಲಾಗಿದೆ. ಇನ್ನೂ ಸಾಕಷ್ಟು ಅರ್ಜಿಗಳು ನೆನೆಗುದಿಗೆ ಬಿದ್ದಿವೆ. ಇನ್ನೇನು ಬೇಸಿಗೆ ಬಂತೆಂದರೆ ಕರೆಂಟಿಗೆ ಇನ್ನೂ ಬೇಡಿಕೆ ಹೆಚ್ಚಾಗಿ ಉಚಿತ ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಕನಸಿನ ಮಾತಾಗುತ್ತದೆ.

ತುಮಕೂರು ಜಿಲ್ಲೆಯಲ್ಲಿ ಬೆಸ್ಕಾಂಗೆ ಸಂಬಂಧಿಸಿದಂತೆ ಮೂರು ವಿಭಾಗಗಳು ಕಾರ್ಯನಿರ್ವಹಿಸುತ್ತವೆ. ತುಮಕೂರು, ತಿಪಟೂರು ಮತ್ತು ಮಧುಗಿರಿ ಬೆಸ್ಕಾಂ ವಿಭಾಗಗಳಿದ್ದು,ಇವುಗಳಲ್ಲಿ ಕಾರ್ಯಪಾಲಕ ಅಭಿಯಂತರರ ದರ್ಜೆಯ ಅಧಿಕಾರಿಗಳು ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಕರ್ನಾಟಕ ಸರ್ಕಾರದ ವತಿಯಿಂದ ಐದು ನಿಗಮಗಳು ಗಂಗಾಕಲ್ಯಾಣ ಯೋಜನೆಯನ್ನು ಬಡವರಿಗೆಂದು ಅನುಷ್ಠಾನ ಮಾಡುತ್ತಿವೆ.ಈ ಐದು ನಿಗಮಗಳಲ್ಲಿ ಕಳೆದವರ್ಷ ಡಿಸೆಂಬರ್ ಅಂತ್ಯದವರೆಗೆ ತುಮಕೂರು ವಿಭಾಗದಲ್ಲಿ ಗಂಗಾಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ 351,ತಿಪಟೂರು ವಿಭಾಗದಲ್ಲಿ 273 ಮತ್ತು ಮಧುಗಿರಿ ವಿಭಾಗದಲ್ಲಿ 708 ,ಒಟ್ಟಾಗಿ 1332 ಯೋಜನೆಗಳು ವಿದ್ಯುದೀಕರಣಕ್ಕೆ ಅರ್ಜಿ ಸಲ್ಲಿಸಿವೆ.

ತುಮಕೂರು ವಿಭಾಗದಲ್ಲಿ ಪರಿಶಿಷ್ಟ ಜಾತಿ ಅಭಿವೃದ್ಧಿ ನಿಗಮದ 114, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ 117,

>>> 7ನೇ ಪುಟಕ್ಕೆ

### ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ನಡುರಾತ್ರಿ

# ಚೂರಿ ಇರಿತಕ್ಕೆ ಆಟೋ ಚಾಲಕ ಬಲಿ

ತುಮಕೂರು

ಮಧ್ಯರಾತ್ರಿಯಲ್ಲಿ ಉಂಟಾದ ಮಾತಿನ ಚಕಮಕಿ ಚೂರಿ ಇರಿತದಲ್ಲಿ ಪರ್ಯಾವಸಾನಗೊಂಡಿದ್ದು, ಚೂರಿ ಇರಿತಕ್ಕೆ ಒಳಗಾದ ಆಟೋ ಚಾಲಕರೊಬ್ಬರು ಅಸು ನೀಗಿದ ಘಟನೆ ನಡೆದಿದೆ.

ತುಮಕೂರು ನಗರದ ಅಶೋಕ ರಸ್ತೆಯಲ್ಲಿರುವ ಖಾಸಗಿ ಬಸ್ ನಿಲ್ದಾಣದಲ್ಲಿ ಭಾನುವಾರ ನಡುರಾತ್ರಿ ಸುಮಾರು 12-30 ರಲ್ಲಿ ಈ ಅಹಿತಕರ ಘಟನೆ ಸಂಭವಿಸಿದ್ದು, ಮೃತ ದುರ್ದೈವಿಯನ್ನು ತುಮಕೂರು ನಗರದ ಸಂತೆಪೇಟೆ ಸನಿಹದ ಜಿ.ಸಿ.ಆರ್. ಕಾಲನಿ ನಿವಾಸಿ ನದೀಂ ಪಾಷ (28) ಎಂದು ಗುರುತಿಸಲಾಗಿದೆ.

ಭಾನುವಾರ ಮಧ್ಯರಾತ್ರಿ 12-30 ರಲ್ಲಿ ಆಟೋ ಚಾಲಕ ನದೀಂ ಪಾಷ ಮತ್ತು ಇತರೆ ಮೂವರ ನಡುವೆ ಮಾತಿನ ಚಕಮಕಿ ಉಂಟಾಗಿದೆ. ಮಾತಿಗೆ ಮಾತು ಬೆಳೆದು ಸದರಿ ಮೂವರು ನದೀಂ ಪಾಷ ಅವರಿಗೆ ಚೂರಿಯಿಂದ ಇರಿದಿದ್ದಾರೆ. ತೀವ್ರವಾಗಿ ಗಾಯಗೊಂಡ ಅವರು ಅದೇ ಸ್ಥಿತಿಯಲ್ಲಿ ನಗರದ ಜಿ.ಸಿ.ಆರ್. ಕಾಲನಿಯಲ್ಲಿರುವ ತಮ್ಮ ನಿವಾಸಕ್ಕೆ ತೆರಳಿದ್ದಾರೆ. ಗಾಬರಿಗೊಂಡ ಮನೆಯವರು ಒಡನೆಯೇ ಇವರನ್ನು ತುಮಕೂರಿನ

>>> 7ನೇ ಪುಟಕ್ಕೆ

ಮಣಿಪಾಲ್ ಹಾಸ್ಪಿಟಲ್
ಬೆಂಗಳೂರಿನ ಕೀಲು ಮತ್ತು ಮೂಳೆ ಶಸ್ತ್ರ ಚಿಕಿತ್ಸಾ ವೈದ್ಯರು ಈಗ ತುಮಕೂರಿನಲ್ಲಿ
● ಮೂಣಕಾಲು ನೋವು
● ಅಸ್ಥಿಸಂಧಿವಾತ
● ಆಸ್ಟಿಯೊಪೊರೋಸಿಸ್
● ಸ್ಪೋರ್ಟ್ಸ್ ಇಂಜ್ಯೂರಿಸ್
● ಕೀಲು ಮತ್ತು ಮೂಳೆ ನೋವು

ಇವುಗಳಿಂದ ಬಳಲುತ್ತಿರುವವರು ವೈದ್ಯರೊಂದಿಗೆ ಭೇಟಿಮಾಡಬಹುದು.
Consultation With
ಡಾ|| ಹರ್ಷವರ್ಧನ್ H.P.
MBBS, MS Ortho, MCh Orth (England)
Fellow in Joint Replacement ( NUH, Singapore)
Speciatist in Arthroscopy & Joint Replacement
ಭೇಟಿಯ ಸಮಯ: ಬೆಳಗ್ಗೆ 11-00 ರಿಂದ ಸಂಜೆ 4-00 ರವರೆಗೆ (ಪ್ರತಿ ಬುಧವಾರದಂದು)
ಸ್ಥಳ: ಮಣಿಪಾಲ್ ಪೇಷಂಟ್ ನೆರವು ಕೇಂದ್ರ ತುಮಕೂರು.
ಹೆಚ್ಚಿನ ಮಾಹಿತಿ ಹಾಗೂ ನೋಂದಣಿ (ಅಪಾಯಿಂಟ್‌ಮೆಂಟ್)ಗಾಗಿ ಕರೆಮಾಡಿ
8123940349
#2384,ಸಿದ್ಧಗಂಗ ಬಡಾವಣೆ
ಬಿ.ಹೆಚ್.ರಸ್ತೆ, ತುಮಕೂರು - 572 102
ಬಿ.ಚಂದ್ರಶೇಖರ: +91 888 44 99 663
ಮಣಿಪಾಲ್ ಹಾಸ್ಪಿಟಲ್ಸ್ ಲೈಫ್ಸ್ ಆನ್ +
ಪೇಷಂಟ್ ನೆರವು ಕೇಂದ್ರ

CMYK CMYK CMYK
05-02-2018.indd 2 2/6/2018 12:00:45 AM